**ಸಾಕ್ಷಿಗೆ ದಿನಾಂಕ 07-12-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ ಆರ್.ಟಿ.ಕೆ. ವಕೀಲರಿಂದ**

ಸರಕಾರದವರು ಸ್ವಾಧೀನಪಡಿಸಿಕೊಂಡ ನನ್ನ ಜಮೀನಿನ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ಗೊತ್ತು. ಸರಕಾರದವರು ನನಗೆ ಸೇರಿದ 4 ಎಕರೆ ಜಮೀನಿನಲ್ಲಿ 1 ಎಕರೆ ಜಮೀನು ಸ್ವಾಧೀನಪಡಿಸಿಕೊಂಡಿದ್ದು ಅದರ ಸ.ನಂ.127 ಆಗಿರುತ್ತದೆ. ಸದರಿ ಜಮೀನು ಇಟಗಿ ಗ್ರಾಮದಲ್ಲಿದೆ. ಗಂಗಾಬಾಯಿ, ಬಸಮ್ಮ, ತಿಪ್ಪಮ್ಮ, ಅಬ್ರಾಹಂಸಾಬ್‌ರವರ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಗಂಗಾಬಾಯಿ, ಬಸಮ್ಮ, ತಿಪ್ಪಮ್ಮ , ಅಬ್ರಾಹಂಸಾಬ್‌ರವರು ಜೀವಂತವಾಗಿದ್ದಾರೆಂದರೆ ನಿಜ. ದಿನಾಂಕ 24-03-2011 ರಂದು ಭೂ ಸ್ವಾ ಧೀನಾಧಿಕಾರಿಗಳು ನಮ್ಮ ಜಮೀನಿಗೆ ಭೇಟಿ ನೀಡಿ ನಮ್ಮ ಜಮೀನಿನಲ್ಲಿ ಯಾವುದೇ ಗಿಡ ಮರ, ಕಟ್ಟಡ, ಬಾವಿ ಇರದ ಬಗ್ಗೆ ವರದಿ ನೀಡಿದ್ದಕ್ಕಾಗಿ ಸದರಿ ವಿಚಾರದ ಬಗ್ಗೆ

ಐತೀರ್ಪಿನಲ್ಲಿ ಉಲ್ಲೇಖ ಆಗಿದೆ ಎಂದರೆ ನಿಜ. ನಮ್ಮ ಜಮೀನಿನನ್ನು ಸರಕಾರದವರು ಸ್ವಾಧೀನಪಡಿಸಿಕೊಂಡ ಸಮಯದಲ್ಲಿ ಒಣಬೇಸಾಯ ಆಗಿತ್ತು ಎಂದರೆ ನಿಜ. ನನ್ನ ಜಮೀನಿನಲ್ಲಿ ನಾನು



ಹತ್ತಿ, ಜೋಳ, ತೊಗರಿ, ಮೆಣಸಿನಕಾರಿಯಿ, ಎಳ್ಳು, ಉಳ್ಳಾಗಡ್ಡಿ, ಹೆಸರು, ಮೆಟ್ಟಿಗೆ , ಗೋಧಿ , ಶೇಂಗಾ, ತೊಗರಿ, ಕಲ್ಲಂಗಡಿ, ಅಜವಾನ, ಕರಬೂಜ, ಕುಂಬಳಕಾಯಿ, ಗಣಸು ಹಾಗೂ ಇತರೆ ಬೆಳೆಗಳನ್ನು ಬೆಳೆಯುತ್ತಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 1 ಎಕರೆ ಜಮೀನಿನಲ್ಲಿ ಮೇಲೆ ಹೇಳಿದ ಎಲ್ಲಾ ಬೆಳೆಗಳನ್ನು ಬೆಳೆಯುತ್ತಿದ್ರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಇಟಗಾ ಗ್ರಾಮ ಕಲ್ಲೂರ ಬಿ ಗ್ರಾಮದಿಂದ 20 ಕಿ.ಮೀ. ದೂರದಲ್ಲಿದೆ ಎಂದರೆ ಸಾಕ್ಷಿ ಸುತ್ತು ಹಾಕಿ ಹೋದರೆ 20 ಕಿ.ಮೀ.ಆಗುತ್ತದೆ ಹಾಗೂ ಮಧ್ಯದ ಹಾದಿಯಿಂದ ಹೋದರೆ 5 ರಿಂದ 6 ಕಿ.ಮೀ. ಆಗುತ್ತದೆ. ನನ್ನ ಜಮೀನಿನ ಪಹಣಿ ಪತ್ರಿಕೆಯ ಕಾಲಂ ನಂ.9ರಲ್ಲಿ ನಾನು ಮೇಲೆ ಹೇಳಿದ ಎಲ್ಲಾ ಬೆಳೆಗಳನ್ನು ಬೆಳೆಯುತ್ತಿದ್ದೆ ಎಂದು ನಮೂದು ಆಗಿಲ್ಲ ಎಂದರೆ ನಿಜ. ಹಳಗಿ ಬಿ ಗ್ರಾಮ ಅಫ್ಜಲ್ಪೂರ ತಾಲೂಕಿನಲ್ಲಿ ಬರುತ್ತದೆ ಎಂದರೆ ನಿಜ. ಸದರಿ ಹಳಗಿ ಬಿ ಗ್ರಾಮ ನಮ್ಮ ಇಟಗಾ ಗ್ರಾಮದಿಂದ 30 ರಿಂದ 35 ಕಿ.ಮೀ.ಆಗುತ್ತದೆ ಎಂದರೆ ನಿಜ. ಸರಕಾರದವರು ಯೋಗ್ಯ ಪರಿಹಾರ ಧನವನ್ನು ನೀಡಿದ್ದರೂ ಸಹ ಹೆಚ್ಚಿ ಗೆ ಪರಿಹಾರ ಧನ ಬೇಕೆಂದು ಈ ಸುಳ್ಳು ಅರ್ಜಿ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2ನೇ ಎದುರುದಾರರ ಪರ L/ADGP ರವರಿಂದ</u>**

ನಮ್ಮ ಜಮೀನನ್ನು ಸ್ವಾ ಧೀನಪಡಿಸಿಕೊಳ್ಳುವ ಪೂರ್ವದಲ್ಲಿ ಪ್ರತಿ ಎಕರೆಗೆ 12 ಲಕ್ಷ ರೂಪಾಯಿ ಬೆಲೆ ಬಾಳುತ್ತಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಪ್ರತಿ ಎಕರೆಗೆ 30 ರಿಂದ 40 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಜಮೀನುಗಳ ಖರೀದಿ ವ್ಯವಹಾರ ಆಗಿದೆ. ಸದರಿ ಖರೀದಿ ವ್ಯವಹಾರಗಳ ದಾಖಲೆಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ನಿಜ. ಸ್ವಾ ಧೀನಪಡಿಸಿಕೊಳ್ಳುವ ಪೂರ್ವದಲ್ಲಿ 1 ಎಕರೆ ಜಮೀನು 12 ಲಕ್ಷ ರೂಪಾಯಿ ಬೆಲೆ ಬಾಳುತ್ತಿತ್ತು ಈಗ ಪ್ರಸ್ತುತವಾಗಿ ಪ್ರತಿ ಎಕರೆಗೆ 30 ರಿಂದ 40 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ ಎಂದು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಂತಹ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಸರಕಾರದವರು ನಮಗೆ ನೀಡಿದ ಪರಿಹಾರ ಧನ ಯೋಗ್ಯವಾಗಿದ್ದರೂ ಸಹ ಹೆಚ್ಚಿಗೆ ಪರಿಹಾರ ಧನ ಬೇಕೆಂದು ಈ ಸುಳ್ಳು ಅರ್ಜಿ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಜಮೀನು ಸ್ವಾಧೀನಪಡಿಸಿಕೊಂಡಂತಹ ಜಮೀನುಗಳಿಗೆ ಆದಂತಹ ತೀರ್ಪುಗಳಿಗೂ ಹಾಗೂ ನನ್ನ ಜಮೀನಿಗೂ

ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರಕರಣದಲ್ಲಿ ಹಾಜರುಪಡಿಸಿದಂತಹ ದಾಖಲೆಗಳು ಸೃಷ್ಟಿಸಿಕೊಂಡ ದಾಖಲಾತಿಗಳಾಗಿವೆ ಎಂದರೆ ಸರಿಯಲ್ಲ.



ಮರುವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ